

# ಕೈ ಹಿಡಿದ ತುಳಸಿ

ಹುಲುಸಾಗಿ ಬೆಳೆದಿರುವ ತುಳಸಿ ಗಿಡಗಳ ನಡುವೆ ಅಂಬರೀಶ್‌ರ ತಾಯಿ ದೇವಮ್ಮ



ತುಳಸಿ ಬೆಳೆದು ಯಶಸ್ವಿಯಾಗಿರುವ ಅಂಬರೀಶ್

**ತುಳಸಿಯನ್ನು ಕೃಷಿಯಾಗಿ ಪರಿಗಣಿಸುವ ರೈತರು ಕಡಿಮೆ. ಈ ವಿರಳ ಸಾಲಿಗೆ ಸೇರಿರುವ ಶ್ರೀರಂಗಪಟ್ಟಣದ ಅಂಬರೀಶ್ ತುಳಸಿ ಕೃಷಿಯಲ್ಲಿ ಯಶಸ್ವಿಯಾಗಿದ್ದಾರೆ.**

■ ಗಣಂಗೂರು ನಂಜೇಗೌಡ

ದೇವರ ಅಲಂಕಾರ, ಅರ್ಚನೆ ಮತ್ತು ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಬಳಸುವ ತುಳಸಿಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುವವರು ತೀರಾ ವಿರಳ. ಮಂಡ್ಯದ ರೈತರೊಬ್ಬರು ಕಬ್ಬು, ಭತ್ತ, ತರಕಾರಿ ಬೆಳೆಯುತ್ತಿದ್ದ ಭೂಮಿಯಲ್ಲಿ ತುಳಸಿ ಬೆಳೆ ಶುರು ಮಾಡಿ ಅದರಲ್ಲೇ ಬದುಕು ಕಂಡುಕೊಂಡಿದ್ದಾರೆ. ಪ್ರತಿ ವಾರವೂ ಹಣ ಗಳಿಸುತ್ತಿದ್ದು, ಮಾಸಿಕ 15ರಿಂದ 18 ಸಾವಿರ ರೂಪಾಯಿವರೆಗೆ ಹಣ ಸಂಪಾದಿಸುತ್ತಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ದರಸಗುಪ್ಪೆ ಗ್ರಾಮದ ರೈತ ಅಂಬರೀಶ್ ಮೂರು ವರ್ಷಗಳಿಂದ ತುಳಸಿ ಬೆಳೆಯುತ್ತಿದ್ದಾರೆ. ಒಂದೂವರೆ ಎಕರೆ ಜಮೀನು ಗುತ್ತಿಗೆ ಪಡೆದು ಅದರಲ್ಲಿ ತುಳಸಿ ನಾಟಿ ಮಾಡಿದ್ದಾರೆ. ತುಳಸಿ ಗಿಡಗಳು ಸೊಂಪಾಗಿ ಬೆಳೆದಿವೆ. ಬೀಜದಿಂದ ತಾವೇ ಪೈರು ಬೆಳೆಸಿ ನಾಟಿ ಮಾಡಿರುವ ಅವರ ತೋಟದಲ್ಲಿ ತುಳಸಿ ಗಿಡಗಳು ನಳನಳಿಸುತ್ತಿವೆ.

ಬೆಳೆದಿರುವ ತುಳಸಿಯನ್ನು ಅಂಬರೀಶ್ ತಮ್ಮ ಕುಟುಂಬದ ಸದಸ್ಯರ ಜೊತೆಗೂಡಿ ಕೊಯ್ದು, ದಾರದಲ್ಲಿ ಕಟ್ಟಿ ಮಾರಿನ ಲೆಕ್ಕದಲ್ಲಿ ಮಾರಾಟ ಮಾಡುತ್ತಿದ್ದಾರೆ. ದೇವರ ಉತ್ಸವ, ಹಬ್ಬ–ಹರಿದಿನಗಳಂದು ಅರ್ಚಕರು, ವ್ಯಾಪಾರಿಗಳು ಮತ್ತು ಭಕ್ತರು ತೋಟಕ್ಕೇ ಬಂದು ತುಳಸಿ ಖರೀದಿಸುತ್ತಾರೆ. ಅಂಥ ವಿಶೇಷ ದಿನಗಳಲ್ಲಿ ಸಾಗಣೆ ವೆಚ್ಚ ಉಳಿಯುತ್ತದೆ.

ಹೂ, ಹಣ್ಣು, ತರಕಾರಿ ಬೆಲೆಗಳು ಏರುಪೇರಾಗುವುದು ಸಹಜ. ಆದರೆ ತುಳಸಿಯ ಬೆಲೆಯಲ್ಲಿ ಸಾಮಾನ್ಯವಾಗಿ ಹೆಚ್ಚಿನ ವ್ಯತ್ಯಾಸ ಆಗುವುದಿಲ್ಲ. ಎಲ್ಲ ಋತುಮಾನದಲ್ಲೂ ತುಳಸಿಗೆ ಹೆಚ್ಚೂಕಡಿಮೆ ಒಂದೇ ಬೆಲೆ ಇರುತ್ತದೆ. ಹಾಗಾಗಿ ನಿಗದಿತ ಆದಾಯ ಸಿಗುತ್ತಿದೆ. ಔಷಧೀಯ ಸಸ್ಯ ಎಂದೇ ಹೆಸರಾಗಿರುವ ತುಳಸಿ ಗಿಡಕ್ಕೆ ರೋಗ, ರುಜಿನಗಳು ಬರುವುದು ಕಡಿಮೆ. ಹಾಗಾಗಿ ಅದರ ಕೃಷಿ ವೆಚ್ಚ ತೀರಾ ಕನಿಷ್ಠ.

## ಅತ್ತೆಯ ಪ್ರೇರಣೆ

ಅಂಬರೀಶ್ ಅವರ ಅತ್ತೆ ಸುಜಾತಮ್ಮ ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಬಳಿ ಎರಡು ದಶಕಗಳಿಂದ ತುಳಸಿ ಮಾರಾಟ ಮಾಡುತ್ತಿದ್ದಾರೆ. ಸಾಕಷ್ಟು ಬಾರಿ ಸಕಾಲಕ್ಕೆ ತಮಗೆ ತುಳಸಿ ಸಿಗದೆ ಅವರು ಪರದಾಡಿದ್ದಾರೆ. ಭತ್ತ, ಕಬ್ಬು, ರಾಗಿ ಬೆಳೆಯುತ್ತಿದ್ದ ತಮ್ಮ ಅಳಿಯನಿಗೆ ತುಳಸಿ ಬೆಳೆಯುವಂತೆ ಅವರು ಒಮ್ಮೆ ಸಲಹೆ ನೀಡಿದ್ದರು. ಸುಜಾತಮ್ಮ ಅವರ ಮಾತನ್ನು ಗಂಭೀರವಾಗಿ ಪರಿಗಣಿಸಿದ ಅಂಬರೀಶ್, ತುಳಸಿ ಬೆಳೆಯಲು ಆರಂಭಿಸಿ ಅದರಲ್ಲಿ ಯಶಸ್ವಿಯಾಗಿದ್ದಾರೆ. ಸಾಂಪ್ರದಾಯಿಕ ಕೃಷಿ ಕೈ ಬಿಟ್ಟು ಪರ್ಯಾಯ ಕೃಷಿ ಅನುಸರಿಸಿ, ಕೃಷಿ ನಷ್ಟದ ಬಾಬ್ತು ಎಂಬುದನ್ನು ಸುಳ್ಳು ಮಾಡಿದ್ದಾರೆ.

‘ತುಳಸಿಗೆ ವರ್ಷೊಂಬತ್ತು ಕಾಲವೂ ಬೇಡಿಕೆ ಇದೆ. ವಿಶೇಷ ದಿನಗಳಲ್ಲಿ ಪೂರೈಸಲಾಗದಷ್ಟು ಬೇಡಿಕೆ ಬರುತ್ತದೆ. ಮೈಸೂರು ಮಾರುಕಟ್ಟೆಯ ವ್ಯಾಪಾರಿಗಳು ಪ್ರತಿ ದಿನ ತುಳಸಿ ತರುವಂತೆ ಹೇಳುತ್ತಾರೆ. ಅಂತೂ ತುಳಸಿ ಬೆಳೆ ನನ್ನ ಕೈ ಹಿಡಿದಿದೆ’ ಎಂದು ಅಂಬರೀಶ್ ಖುಷಿಯಿಂದ ಹೇಳುತ್ತಾರೆ.

ತುಳಸಿ ಕೃಷಿಯ ಬಗ್ಗೆ ಆಸಕ್ತರು ಅಂಬರೀಶ್‌ರನ್ನು ಸಂಪರ್ಕಿಸಬಹುದಾದ ಸಂಖ್ಯೆ: 9741819614

ಪ್ರತಿಕ್ರಿಯಿಸಿ: feedback@sudha.co.in